ನಿಯಮ 334ರ ಮೇರೆಗೆ ಸಹಕಾರಿ ಸಂಘಗಳಿಂದ ಪಡೆದ ರೈತರ ಸಾಲಗಳಿಗೆ ಬಡ್ಡಿಯಲ್ಲಿ ರಿಯಾಯಿತಿ ತೋರಿಸುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ.– ಮಾನ್ಯ ಅಧ್ಯಕ್ಷರೇ, ''ಇಡೀ ರಾಜ್ಯದಲ್ಲಿ ಭೀಕರ ಬರಗಾಲ ಕಾಡುತ್ತಿರುವ ಈ ಸಂದರ್ಭದಲ್ಲಿ ಎಲ್ಲ ರೈತರು ಒಂಬಲ್ಲ ಒಂದು ರೀತಿಯಲ್ಲಿ ತೊಂದರೆಗೊಳಗಾಗಿದ್ದಾರೆ. ಆದರಿಂದ ೧೯೮೫-೮೬ನೇ ಸಾಲಿನಲ್ಲಿ ಸಹಕಾರಿ ಸಂಘಗಳಿಂದ ಸಾಲ ಪಡೆದಿರುವ ರೈತರಿಗೆ ಈಗ ಇರುವ ಸರ್ಕಾರಿ ಆಜ್ಞೆಯಂತೆ ಕೇವಲ ಫೆಬ್ರುವರಿ ಕೊನೆಯವರೆಗೆ ಸಾಲ ವಾಪಸ್ಸು ಕಟ್ಟುವ ರೈತರಿಗೆ ಬಡ್ಡಿಯಲ್ಲಿ ರಿಯಾಯಿತಿ ಇದ್ದು, ಇದರ ಅವಧಿಯನ್ನು ಪ್ರಾಮಾಣಿಕವಾಗಿ ಅಲ್ಪಸ್ವಲ್ಪ ಬೆಳೆ ಆಗಿದ್ದು ಸಾಲ ವಾಪಸ್ಸು ಕಟ್ಟುವ ರೈತರಿಗೆ ಅನುಕೂಲವಾಗುವಂತೆ ತಕ್ಷಣ ಈ ಒಂದು ರಿಯಾಯಿತಿಯ ಅವಧಿಯನ್ನು ಏಪ್ರಿಲ್ ಕೊನೆಯವರೆಗೆ ವಿಸ್ತರಿಸಬೇಕೆಂದು ವಿನಂತಿಸುತ್ತ ಈ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.– ಸನ್ಮಾನ್ಯ ಸದಸ್ಯರಂ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.– ಸಹಕಾರ ಮಂತ್ರಿಯವರು ಸದನದಲ್ಲಿ ಇಲ್ಲ. ಮಾನ್ಯ ಕಾನೂನು ಮಂತ್ರಿಯವರೇ ಸಹಕಾರ ಮಂತ್ರಿಯವರ ಕೆಲಸ ಮಾಡುತ್ತಿದ್ದಾರೋ ಎಂಬುದೂ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.– ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ...

ಶ್ರೀ ಬಿ.ಎಸ್. ಯಡಿಯೂರಪ್ಪ.– ಸಹಕಾರ ಮಂತ್ರಿಯವರು ಬಂದ ಮೇಲೆ ನನಗೆ ಉತ್ತರ ಕೊಡಲಿ.

2. ಮಂಗಳೂರು ನಗರಪಾಲಿಕೆ ಒಳಪಟ್ಟ ಸಗಟು ಮಾನು ಮಾರ್ಕೆಟ್ಟಿನ ವಿವಾದದ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.– ಮಾನ್ಯ ಅಧ್ಯಕ್ಷರೇ, ''ಮಂಗಳೂರು ಮಹಾನಗರಪಾಲಿಕೆಗೆ ಒಳಪಟ್ಟ ಸಗಟು ಮಾನಿನ ಮಾರ್ಕೆಟ್ ಬಗ್ಗೆ ಭಾರಿ ವಾದ-ವಿವಾದವಾಗಿದ್ದು, ಇನ್ನೂ ಅದು ಎಲ್ಲಿ ಆಗಬೇಕೆಂಬ ಬಗ್ಗೆ ಯಾವುದೇ ನಿಷ್ಕರ್ಷೆ ಆಗಿಲ್ಲ. ಇವರ ತೀರ್ಮಾನ ಮಹಾನಗರಪಾಲಿಕೆಯೇ ತೆಗೆದು ಕೊಳ್ಳುವುದೂ ಅತ್ಯಂತ ಸೂಕ್ಷ್ಮ. ಈ ಮಧ್ಯೆ ಸರಕಾರ ಸದರಿ ಮಹಾನಗರ ಪಾಲಿಕೆಗೆ ಪತ್ರ ಬರೆದು ಸದರಿ ಸಗಟು ಮಾನಿನ ಮಾರ್ಕೆಟ್ಟು ಕಂಕನಾಡಿಯಲ್ಲಿ ಆಗಲೆಂದು ತಿಳಿಸಿದೆ. ಆದರೆ ಕಂಕನಾಡಿ ದಿನಸಿ ಬಿಡಿ ವ್ಯಾಪಾರ ವಹಿವಾಟಿನ ಕೇಂದ್ರ ಸ್ಥಾನ. ಮನೆಗಳು, ಆಫೀಸುಗಳು ಇರುವಂತಹ ಪ್ರಾಮುಖ್ಯ ಸ್ಥಳ. ಅಲ್ಲಿಯ ಸರ್ವರೂ ಅದನ್ನು ವಿರೋಧಿಸಿರುತ್ತಾರೆ. ಅಲ್ಲದೆ ಕಂಕನಾಡಿಯ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆಯು ಒಪ್ಪುತ್ತಿಲ್ಲ. ಅವರ ಸಭೆಯಲ್ಲೂ ಚರ್ಚೆಯಾಗಿ ವಿರೋಧಿಸಲಾಗಿದೆ. ಹೀಗಿರುವಾಗ ಈ ಸಮಸ್ಯೆಯನ್ನು ವಿಳಂಬ ಮಾಡದೆ ಮಂಗಳೂರು ಮಹಾನಗರ ಪಾಲಿಕೆಯ ತೀರ್ಮಾನಕ್ಕೆ ಬಿಟ್ಟು ಕೊಡುವುದು ಅತ್ಯಂತ ಸೂಕ್ಷ್ಮ. ಆದ ಕಾರಣ ಸರಕಾರ ಶೀಘ್ರವೇ ಆದೇಶ ನೀಡಿ ಮಂಗಳೂರು ಮಹಾನಗರಪಾಲಿಕೆಯೇ ತೀರ್ಮಾನ ಕೈಗೊಳ್ಳುವಂತೆ ತಿಳಿಸುವುದು ಅತಿ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಅಧ್ಯಕ್ಷರೇ, ಈ ವಿಷಯವು ಹೈಕೋರ್ಟಿನಲ್ಲಿ ಇದೆ. ಇವತ್ತು ಹಿಯರಿಂಗ್ ಸಹ ಇದೆ.

3. ಬೆಂಗಳೂರು ನಗರದ ಸುತ್ತ ಮುತ್ತಲು ನಡೆದಿರುವ ದರೋಡೆ ಪ್ರಕರಣಗಳು

ಶ್ರೀ ಆರ್. ವೆಂಕಟರಾಮಯ್ಯ.– ಮಾನ್ಯ ಅಧ್ಯಕ್ಷರೇ, ''ಕರ್ನಾಟಕ ರಾಜ್ಯದ ಆದರಲ್ಲೂ ಬೆಂಗಳೂರು ನಗರ ಮತ್ತು ಸುತ್ತ ಮುತ್ತಲಿನ ಬಡಾವಣೆಗಳಲ್ಲಿ ಹಾಗೂ ಹೊರವಲಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯ ನರಸಾಪುರದಲ್ಲಿ ಇತ್ತೀಚೆಗೆ ನಡೆದ ಅಮಾನವೀಯ ಕೊಲೆಗಳು, ಭೀಕರ ದರೋಡೆಗಳಿಂದ ಇಡೀ ರಾಜ್ಯದ ಜನತೆ ಭಯಭೀತರಾಗಿರುತ್ತಾರೆ. ಹೊರವಲಯಗಳಲ್ಲಿ ಜೀವಿಸುತ್ತಿದ್ದ ಜನತೆ ತಮ್ಮ ಪ್ರಾಣ ರಕ್ಷಣೆಗಾಗಿ ನಗರದ ಮಧ್ಯ ಭಾಗಕ್ಕೆ ಬಂದು ಜೀವಿಸುತ್ತಿದ್ದಾರೆ. ಹಳ್ಳಿಗಾಡುಗಳಲ್ಲಿ ಮುಗ್ಧ ಜನತೆ ರಾತ್ರಿ ಹೊತ್ತು ನಿದ್ದೆ ಕೆಟ್ಟು ಭಯದ ವಾತಾವರಣದಲ್ಲಿ

ನಡುಗುತ್ತಿದ್ದಾಗಲೂ ರಕ್ಷಣಾ ಇಲಾಖೆ ನಿಜವಾದ ಕಳ್ಳರನ್ನು ಹಿಡಿಯಲು ನಿಶ್ಶಕ್ತವಾಗಿದೆ. ಒಂದು ಲಕ್ಷ ರೂಪಾಯಿಗಳ ಬಹುಮಾನ ಘೋಷಿಸಿದ್ದರೂಸಹ ಕಳ್ಳರನ್ನು ಹಿಡಿಯುವಲ್ಲಿ ಪೋಲೀಸರು ನಿಷ್ಕ್ರಿಯರಾಗಿರಲು ಕಾರಣವೇನು?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು) ಬೆಂಗಳೂರು, ಮಂಗಳೂರು ನಗರ ಹಾಗೂ ಮತ್ತಿತರ ಭಾಗಗಳಲ್ಲಿ ನೆಡೆದಿರುವ ದರೋಡೆ, ಖೊನಿಗಳ ಕೃತ್ಯಗಳ ವಿಷಯದಲ್ಲಿ ಸಾಮಾನ್ಯ ಜನತೆ ನೊಂದಿದ್ದಾರೆ ಮತ್ತು ಕಳವಳದಲ್ಲಿದ್ದಾರೆ ಎನ್ನುತಕ್ಕದ್ದು ಕೂಡ ಎಲ್ಲರಿಗೂ ಗೊತ್ತಿರುವ ವಿಷಯ. ನಾನೂ ಕೂಡ ಆ ಸ್ಥಳಗಳಿಗೆ ಭೇಟಿ ಕೊಟ್ಟಿದ್ದೇನೆ ಹಾಗೂ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಇನ್ನು ಕೆಲವೇ ದಿನಗಳಲ್ಲಿ ಈ ದರೋಡೆಕೋರರನ್ನು ಹಿಡಿಯತಕ್ಕ ಭರವಸೆಯನ್ನು ನಾನು ಕೊಡುತ್ತೇನೆ. ಮಂಗಳೂರು ನಗರದಲ್ಲಿ ದರೋಡೆಯನ್ನು ಮಾಡಿರುವವರನ್ನು ಇನ್ನು ೮ ದಿವಸದಲ್ಲಿ ಹಿಡಿಯುತ್ತೇವೆಂದು ಮತ್ತು ಪರದಿಯನ್ನು ಒಪ್ಪಿಸುತ್ತೇನೆ. ಇನ್ನಿತರ ದರೋಡೆ ಕೋರರನ್ನು ಹಿಡಿಸುವುದಕ್ಕೆ ಬೇಕಾಗುವ ಸೂಚನೆಗಳನ್ನು ಕೊಡುವವರಿಗೆ ೧ ಲಕ್ಷ ರೂಪಾಯಿಗಳನ್ನು ಬಹುಮಾನವಾಗಿ ಕೊಡುತ್ತೇವೆಂದು ಸಹ ಘೋಷಿಸಿದ್ದೇನೆ. ಎಲ್ಲಾ ದರೋಡೆ ಕೋರರನ್ನು ಹಿಡಿಯತಕ್ಕ ಭರವಸೆ ನಮಗಿದೆ. ಅನಿರೀಕ್ಷಿತವಾಗಿ ಬಂದಂತಹ ತೊಂದರೆಯನ್ನು ಮಾನ್ಯ ಸಾರ್ವಜನಿಕರು ಕ್ಷಮಿಸಬೇಕು. ೧೯೮೫-೮೬ಕ್ಕಿಂತ ಹಿಂದೆ ನಡೆದ ಕೆಲವು ದರೋಡೆ ಪ್ರಕರಣ ಮತ್ತು ಕಳ್ಳತನ ಪ್ರಕರಣಗಳು ಈಗಲೂ ಪತ್ತೆಯಾಗುತ್ತವೆ, ಅಪರಾಧಗಳು ಮಾಡುವ ಜನರು ಒಂದೊಂದು ಸಾರಿ ಬೇಗಸಿಕ್ಕುತ್ತಾರೆ. ಕೆಲವು ಸಾರಿ ಸಿಕ್ಕುವುದಿಲ್ಲ. ತುಮಕೂರು, ಧಾರವಾಡ, ಬಳ್ಳಾರಿಗಳಲ್ಲಿ ದರೋಡೆ ಮಾಡಿದ ಡಕಾಯಿತರು ಸಿಕ್ಕಿದ್ದಾರೆ. ಇನ್ನೂ ಪತ್ತೆ ಮಾಡುತ್ತೇದ್ದೆವೆ. ಇನ್ನುಳಿದ ಡಕಾಯಿತರನ್ನೂ ಹಿಡಿಯುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.— ಸಿಕ್ಕಿರುವ ದರೋಡೆ ಕೋರರ ಮೇಲೆ ಚಾರ್ಜ್‌ಶೀಟನ್ನು ಏಕೆ ಹಾಕಲಿಲ್ಲ.

ಅಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರೇ, ತಾವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.— ಮಾನ್ಯ ಸದಸ್ಯರವರ ಕ್ಷೇತ್ರದಲ್ಲಿ ಹೆಚ್ಚು ದರೋಡೆ ಆಗಿರುವುದರಿಂದ. ಆವರು ಉದ್ರೇಕರಾಗಿದ್ದಾರೆ. ದರೋಡೆಕೋರರನ್ನು ನಾವು ಹಿಡಿಯುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.— ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೇನಾ ಬಂದಿರುವುದು?

ಅಧ್ಯಕ್ಷರು.— ಸುಮ್ಮನೆ ಕುಳಿತುಕೊಳ್ಳುವುದಕ್ಕೂ ಮತ್ತು ಮಾತನಾಡುವುದಕ್ಕೂ ಬಂದಿದ್ದೀರಿ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.— ಮಾನ್ಯ ಸದಸ್ಯರು ಏನು ಹೇಳಬೇಕೆಂದು ಇದ್ದರೋ ಅದರ ಬಗ್ಗೆಯೇ ನಾನು ಹೇಳುತ್ತಿದ್ದೇನೆ

ಶ್ರೀ ಬಿ. ಬಸವಲಿಂಗಪ್ಪ.— ನನ್ನ ಕ್ಷೇತ್ರದಲ್ಲಿ ಇದುವರೆಗೆ ೯ ದರೋಡೆಗಳು ನಡೆದಿದೆ. ಇದಂವರೆಗೂ ಒಬ್ಬ ದರೋಡೆಕೋರರನ್ನೂ ಹಿಡಿಯಲಿಲ್ಲ.

ಶ್ರೀ ಬಿ. ರಾಚಯ್ಯ.— ಈ ದರೋಡೆಕೋರರನ್ನು ಹಿಡಿಯುವುದಕ್ಕೋಸ್ಕರ, ನಗರದಲ್ಲಿ ಹಾಗೂ ವಿಶೇಷವಾಗಿ ನಗರದ ಹೊರವಲಯಗಳಲ್ಲಿ ೭೫ ಸಂಚಾರಿ ಪೋಲೀಸ್ ದಳಗಳನ್ನು ನೇಮಿಸಿದ್ದೇವೆ. ಈ ದುರ್ನಡತೆ ಇರುವ ದರೋಡೆಕೋರರು ಎಲ್ಲಿ ಅಡಗಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆಯೂ ತಪಾಸಣೆ ನಡೆಯುತ್ತಿದೆ. ಈ ಪ್ರಕರಣಗಳನ್ನು ತನಿಖೆ ಮಾಡಲು ಪತ್ತೆದಾರಿ ದಳಗಳು ಕೆಲಸ ಮಾಡುತ್ತಿವೆ. ಪ್ರಯೋಗಾಲಯದ ತಜ್ಞರು ಸಹ ಸ್ಥಳಗಳಿಗೆ ಭೇಟಿ ನೀಡಿರುತ್ತಾರೆ. ತಮಿಳುನಾಡು, ಆಂದ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ಪೋಲೀಸ್ ದಳಗಳ ನೆರವನ್ನು ಸಹ ತೆಗೆದುಕೊಂಡಿದ್ದೇವೆ. ಕೆಲವು ದಿನಗಳ ಹಿಂದೆ ಒಬ್ಬ ದರೋಡೆ ಕೋರ ಸಿಕ್ಕಿದ್ದಾನೆ. ಇವನು ಲಂಕಾ ದೇಶದ ವ್ಯಕ್ತಿಯಾಗಿ, ತಮಿಳುನಾಡಿನಿಂದ ಬಂದವನೆಂದು ತಿಳಿದು, ತಮಿಳುನಾಡು ಪೋಲೀಸರ ಸಹಾಯಕನ್ನೂ ಸಹ ಕೋರಲಾಗಿದೆ. ದರೋಡೆಕೋರರನ್ನು ಪತ್ತೆಹಚ್ಚಲು ಸಾಧನೋಪಾಯಗಳನ್ನು ಕಂಡುಹಿಡಿಯುವುದಕ್ಕೆ "ನಾರ್ಕೊ ಬಂಧಿ" ಗಳನ್ನು ಜಾರಿಗೊಳಿಸಲಾಗಿದೆ. ರಾತ್ರಿ ಸಮಯದಲ್ಲಿ ಸಂಚರಿಸುವ ವ್ಯಕ್ತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಹಾಗು ಶಸ್ತ್ರ ಪಡೆಗಳನ್ನು ಸುಮಾರು ಏಳನೂರ ಸ್ಥಳಗಳಲ್ಲಿ ಇಡಲಾಗಿದೆ.